Reg No M. 1229 Sri 8—3—1956

೩೯ನೇ ವರ್ಷ - 39 th Year

ಸತ್ಯವಾದಿ

SATYAVADI

ಪ್ರತಿ 3 ಪೈ] ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬಾಯರ

ಬಳ್ಳಾರಿಯ ಬಗ್ಗೆ ಬದಲಾವಣೆಯೇನೂ ಇಲ್ಲ

ಸಕ್ಕರೆ ಕಾರ್ಖಾನೆ

ನವದೆಹಲಿ ಮಾ 6— ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ 35 ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸುವುದಾಗಿ ಲೋಕಸಭೆಯಲ್ಲಿ ತಿಳಿಸಲಾಯಿತು

ಮೂಲ ಶಿಕ್ಷಣ ಸಂಬಂಧವಾಗಿ

ನವದೆಹಲಿ ಮಾ 6—ಇಲ್ಲಿ 1956 ಏಪ್ರಿಲ್ಲಿನಲ್ಲಿ ಕೇಂದ್ರ ಶಿಕ್ಷಣ ಮಂತ್ರಿ ಶಾಖೆಯವರು ಅಖಿಲ ಭಾರತ ಮೂಲ ಶಿಕ್ಷಣ ಸಂಬಂಧದ ವಸ್ತು ಪ್ರದರ್ಶನ ವನ್ನು ವ್ಯವಸ್ಥೆ ಮಾಡಿದ್ದಾರೆ.

ಸಂದೇಶ

ವಾಸ್ಕೊ ಮಾ 1— ತಾ|| 8 ರಲ್ಲಿ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಸಂಬಂಧದಲ್ಲಿ ಮಹಿಳಾ ಅಂತರ ರಾಷ್ಟ್ರೀಯ ಡೆನೊಕ್ರಾಟಿಕ್ ಫೆಡರೇಷನ್ನಿನವರು ಪ್ರಪಂಚದ ಸ್ತ್ರೀಯರಿಗೆ ಒಂದು ಸಂದೇಶ ಹೊರಡಿಸಿದ್ದಾರೆ.

ನೆಹರು ಪ್ರವಾಸ

ಹುಬ್ಬಳ್ಳಿ — ಪಂ|| ನೆಹರು ಈ ನಿನ ಕಾರ್ಯ ದಂತೆ 31 ನೇ ತಾ|| ಬೆಳಗಾ ಬೊಂಬಾಯಿ ಕ ಪ್ರವಾಸ ಮಾಡು

ವಿಫಲ

ಲಂಡನ್ ಮಾ6— ಗ್ರೀಸಿನೊಂದಿಗೆ ಸೈಪ್ರಸ್ಸು ವಿಲೀನಗೊಳಿಸಬೇಕೆಂಬ ಚಳವಳಿಯ ನಾಯಕರಾದ ಆರ್ಚ್‌ಬಿಷಪ್ ಮಕೇರಿಯೋಸರವರೊಂದಿಗೆ ಬ್ರಿಟಿಷ್ ನಡೆಸಿದ ಸಂಧಾನ ವಿಫಲವಾದುದಾಗಿ ಪ್ರಕಟವಾಗಿದೆ.

ಬದಲಾಯಿಸುವದಿಲ್ಲ

ಕರ್ನೂಲು 7 — ಆಂಧ್ರದ ಮಂತ್ರಿ ಡಾ|| ಎ ಬಿ ನಾಗೇಶ್ವರರಾಯರು ಸೇತ್ಯಶ್ವದಲ್ಲಿ ಪಂ| ನೆಹರುವನ್ನು ಹೈದರಾಬಾದಿನಲ್ಲಿ ಕಂಡ ನಿಯೋಗಕ್ಕೆ ಬಳ್ಳಾರಿ ಮತ್ತು ತುಂಗಭದ್ರ ಯೋಜನೆ ಪ್ರದೇಶಗಳನ್ನು ಮೈಸೂರು ಪ್ರಾಂತದಲ್ಲೇ ಉಳಿಸಬೇಕೆಂಬ ಭಾರತ ಸರ್ಕಾರದ ತೀರ್ಮಾನ ಬದಲಾಯಿಸಲು ಸಾಧ್ಯವಿಲ್ಲವೆಂದು ಉತ್ತರಿಸಿಕ್ಕೆತೆಂದು ಗೊತ್ತಾಗಿದೆ.

ತನಿಖೆ

ಬೊಂಬಾಯಿ 7 — ಬೊಂಬಾಯಿ ಪೋಲೀಸಿನ ಸ್ಪೆಷಲ್ ಬ್ರಾಂಚು ಭಾರತ ಸರ್ಕಾರದ ಅಂದಾಜಪಟ್ಟ ರಹಸ್ಯ ಬಯಲಿನ ಕುರಿತು ತನಿಖೆ ಕೈಗೊಂಡಿದೆ ಅನೇಕ ವಾಣಿಜ್ಯೋದ್ಯಮಿಗಳನ್ನು ನಿನ್ನೆಯಿಂದ ಪೋಲೀಸರು ವಿಚಾರಣೆ ಮಾಡಿದರು.

ಬುಲ್ಗಾನಿನ್ ಸಿದ್ಧ

ಮಾಸ್ಕೊ 6 — ರಷ್ಯದ ಪ್ರಧಾನಿ ಮಾ|| ಬುಲ್ಗಾನಿನ್‌ರವರು ಇಂದಿಲ್ಲಿ ಹೇಳಿಕೆಯಿತ್ತು ಅಧ್ಯಕ್ಷ ಐಸೆನ್‌ಹೋವರರೊಡನೆ ಮಾತುಕತೆ ನಡೆಸಲು ಯಾವಾಗಬೇಕಾದರೂ ವಾಷಿಂಗ್ಟನ್‌ಗೆ ಭೇಟಿಕೊಡಲು ತಾವು ಸಿದ್ಧರೆಂದು ತಿಳಿಸಿರುವರು

ಈಲ್ ಸ್ಕೂಲ್ ವಜವಾಯಿತು

7 — ವೆ ಡಿಕಲ್‌ಸ್ಕೂ ವಿವ ಲಜ್ಜೆಯೊಂದ

ದ್ರಾಕ್ಷಿಹಣ್ಣಿನ ಪ್ರದರ್ಶನ

ಬೆಂಗಳೂರು ಮಾ 5— ನವದೆಹಲಿ ವ್ಯವಸಾಯ ಸಂಶೋಧನೆಯ ಭಾರತೀಯ ಪರಿಷತ್ತು ಮಾರ್ಚಿ ತಿಂಗಳ 17, 18 ರಂದು ಹೈದರಾಬಾದಿನಲ್ಲಿ ಅಖಿಲ ಭಾರತ ದ್ರಾಕ್ಷಿಹಣ್ಣಿನ ಪ್ರದರ್ಶನವನ್ನು ನಡೆಸುವದು.

ಸರ್ಕಾರದ ವಶಕ್ಕೆ?

ಬೆಂಗಳೂರು ನಗರದಲ್ಲಿ ವೈದ್ಯ ಶಿಕ್ಷಣ ಸಮಿತಿಯವರು ಕಳೆದ ವರ್ಷದಿಂದ ನಡೆಸುತ್ತಿರುವ ಮೆಡಿಕಲ್ ಕಾಲೇಜನ್ನು ಸರ್ಕಾರ ವಹಿಸಿಕೊಳ್ಳಲು ಆಲೋಚಿಸುತ್ತಿದೆಯೆಂದು ತಿಳಿದುಬಂದಿದೆ.

ಸಾಲಾ ಕೊಡಿ

ನವದೆಹಲಿ ಮಾ 6— ಭಾರತವು ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾರ್ಯಗತ ಮಾಡಲು ಶೇ 2 ರಂತೆ 50 ಕೋಟಿ ಡಾಲರುಗಳನ್ನು ಮೂವತ್ತು ವರ್ಷಗಳ ತೀವ್ರ ಸಾಲವಾಗಿ ಅಮೇರಿಕಾ ನೀಡಬೇಕೆಂದು ಹನಿ, ಮಾರ್ಗೆಂಥೊ ಇಲ್ಲಿ ಹೇಳಿದರು.

ವಿಚಾರ ಗೊತ್ತಿಲ್ಲ

ಪಾಟ್ನಾ ಮಾ ೬— ಬೀಹಾರು-ಬಂಗಾಳಗಳ ವಿಲೀನೀಕರಣ ವಿಚಾರದಲ್ಲಿ ದೆಹಲಿಯಲ್ಲಿ ದಂಡುವೇಜು ಸಮ್ಮೇಳನವೊಂದನ್ನು ಕರೆಯಲಾಗುವುದೆಂಬ ವಿಚಾರ ತಮಗೇನೂ ಗೊತ್ತಿಲ್ಲವೆಂದು ಬಿಹಾರು ಮುಖ್ಯ ಮಂತ್ರಿ ಶ್ರಿ ಕೃಷ್ಣಸಿನ್ಹ ಪತ್ರಿಕೆಯವರಿಗೆ ತಿಳಿಸಿದರು.

ಸಜಾ ವಿಧಿ

ರಾಬರ್ಟ್‌ಸನ್‌ಪೇಟೆ ಮಾ ೬— ಗೆಟ್ಟ ರಾಗದ ಹಳ್ಳಿಯ ಒಳ ಎಮ್ಮೆಯೊಂದನ್ನು ಕಡಿಯುವ ಯತ್ನದಲ್ಲಿದ್ದಾಗ ಪತ್ತೆಹಚ್ಚಲ್ಪಟ್ಟ ಮುನಿಸ್ವಾಮಿ, ಪಿಳ್ಳಪ್ಪ ಮತ್ತು ತಿಪ್ಪಯ್ಯ ಎನ್ನುವವರಿಗೆ ತಲಾ ರೂ 25 ಜುಲ್ಮಾನೆ ಮತ್ತು 7 ದಿವಸಗಳ ಸಾದಾ ಸಜಾ ವಿಧಿಸಲಾಯಿತು.

ನಾಳೆಯಿಂದ ಂಗ

ಆ|| ಮಹಾ ಾಮಣಿ

ಸಂಪು

ಮುಖ್ಯ ಮಂತ್ರಿಯವರ ಭಾಷಣ

ಬೆಂಗಳೂರು ಮಾ 7— ವಿಶ್ವಾ ಮತ್ತು ದೂರಪ್ರಾಚ್ಯದ ದೇಶಗಳ ಮೂಲೆ ಮೂಲೆಗಳಿಗೂ ವಿದ್ಯುಚ್ಛಕ್ತಿಯನ್ನೊದಗಿಸಿ ಹೊರತು ಸಾಮಾನ್ಯ ಮನುಷ್ಯನ ಬಾಳು ಉತ್ತಮಗೊಳ್ಳಲಾರದು, ಎಂದು ಇಕಾಫೆಯ ವಿದ್ಯುಚ್ಛಕ್ತಿ ಉಪಸಮಿತಿಯ 5 ನೇ ಅಧಿವೇಶನವನ್ನು ಪ್ರಾರಂಭಗೊಳಿಸುತ್ತಾ ಮಾಡಿದ ಭಾಷಣದಲ್ಲಿ ಹೇಳಿದರು.

ಟ್ರೋಜ್ಕ ಕುದುರೆ

ಕರಾಚಿ ಮಾ — ಸೀಟೋ ಆಂಧ್ರ ಅಧಿವೇಶನದಲ್ಲಿ, ರಷ್ಯವು ತನ್ನ ಪ್ರಭಾವ ಬೆಳೆಸಿಕೊಳ್ಳಲು ನಡೆಸುತ್ತಿರುವ ತಂತ್ರ ಆಧುನಿಕ ಟ್ರೋಜ್ಕ ಕುದುರೆ ಎಂದು ಅಮೇರಿಕಾದ ಸಂಸ್ಥಾನ ಕಾರ್ಯದರ್ಶಿ ಡಲೆಸರು ತಿಳಿಸಿದರು.

ಕೋರಿಕೆ ಸಲ್ಲಿಕೆ

ಕರಾಚಿ ಮಾ 6— ಕಾಶ್ಮೀರ ಭವಿಷ್ಯ ನಿರ್ಧಾರಕ್ಕಾಗಿ ಕಾಶ್ಮೀರದಲ್ಲಿ ಶೀಘ್ರವೇ ಪ್ಲೆಬಿಸೈಟು ಏರ್ಪಡಿಸಲಂತೆ ಮಾಡಲು ಸೀಟೊ ರಾಷ್ಟ್ರಗಳು ಬೆಂಬಲ ನೀಡಬೇಕೆಂದು ಪಾಕಿಸ್ತಾನ ಕೋರಿಕೆ ಸಲ್ಲಿಸಿತು.

× ಮೈಸೂರು ಪೌರಸಭೆಯು ಕುರ್ತು ತು ವಿಶೇಷ ಅಧಿವೇಶನ ಕಳೆದ ದಿನ ಬೆಳಿಗ್ಗೆ ಶೀ ಎ. ಕೃಷ್ಣಮೂರ್ತಿಯಂಗಾರ್ಯರ ಅಧ್ಯಕ್ಷತೆಯಲ್ಲಿ ಸೇರಿ ಡಾ|| ಮಹಾರಾಣಿ ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದನ್ನ ನಿಧನ ಒಗ್ಗೆ ಸಂತಾಪಿಸಿತು

× ಎಲ್ಲೆಲ್ಲಿ ತಂಗಡಿಯಲಿ ಓದುತ್ತಿರುವ ಹಿಂದೂ ತಂಗಿಯೋರ್ವಳು ವಿವಾಹವಾಗಿರುವ ತನ್ನ ಮುಸ್ಲಿಂ ಸ್ನೇಹಿಯೊಂದಿಗೆ ಅಹಮದಾಬಾದಿನ ಸಾರಾಜನಿಕ ಉದ್ಯಾನದಲ್ಲಿ ಎಲ್ಲಾ ಸವಾರಿಮಾಡುತ್ತಿದ್ದದ್ದನ್ನು ಗಸ್ತು ನಿಸಿದ ಪೋಲೀಸರು ಬಸ್ಸಿಂಗ ಅಶ್ಲೀಲದ ಬಗ್ಗೆ ಈ ಅಕ್ರಮ ಸ್ನೇಹಿಯಗಳನ್ನು ಎಚ್ಚರಿಸಿದರೂ ಗಸ್ತುವಳ್ಳಿ ಇದ್ದ ಕಾರಣ ಬಂಧಿಸಲ್ಪಟ್ಟು ಜಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟರು.

ಚಿಕ್ಕ ಚಾರಿತ್ರಿಕ ನಾಟಕ—

ಜೇಬುನ್ನೀಸಾ

(ಮುಂದುವರಿದುದು)

(ರಜಿಯಾ ಗಾಬರಿಯೊಡನೆ ಓಡುತ್ತಾ ಬರುತ್ತಾಳೆ)

ರಜಿ— ರಾಜಕುಮಾರೀ, ರಾಜಕುಮಾರೀ !

(ಜೇಬು ಮತ್ತು ದಿಲೀಪ್ ಗಾಬರಿಗೊಂಡು ರಜಿಯಾ ಬರುತ್ತಿದ್ದ ಕಡೆಯಲ್ಲಿಯೇ ನೋಡುತ್ತಾರೆ)

ರಜಿ— ಸೈನಿಕರು ಅಂತಃಪುರದ ಸುತ್ತಲೂ ಪಹರೆಯನ್ನು ಮಾಡುತ್ತಿದ್ದಾರೆ; ಯಾರನ್ನೂ ಹೊರಕ್ಕೆ ಬಿಡುವುದಿಲ್ಲ, ಒಳಕ್ಕೂ ಬಿಡುವುದಿಲ್ಲ ; (ಮೇಲುಸಿರು ಬಿಡುತ್ತಾ ಹೇಳುತ್ತಾಳೆ)

ಜೇಬು, ದಿಲೀಪ್— (ಮತ್ತಷ್ಟು ಗಾಬರಿಯೊಡನೆ ಒಂದೇಬಾರಿ) (ನಿಶ್ಚೇಷ್ಟರಾಗಿ ನಿಂತುಬಿಡುತ್ತಾರೆ)

ರಜಿಯಾ— (ನಡುಗುತ್ತಾ) ರಾಜಕುಮಾರೀ, ಈಗ ಏನು ಮಾಡಬೇಕು ?

ದಿಲೀ— ನಾನು ಯಾವ ಬಗೆಯಲ್ಲಿಯೋ ತಪ್ಪಿಸಿಕೊಂಡು ಹೋಗುತ್ತೇನೆ; ಜೇಬೂ, ನಾನು ಅಂತಃಪುರದಲ್ಲಿ ಇರುವಿಕೆಯಿಂದ ನಿನಗೆ ಯಾವುದಾದರೂ ಅಪಾಯವು ಉಂಟಾಗಬಹುದು.

ಜೇಬು— ಬೇಡ ದಿಲೀಪ್ ; ನನಗೆ ಯಾವ ಅಪಾಯವೂ ಇಲ್ಲ; ನೀವು ಓಡಿಹೋದಲ್ಲಿ ಸೈನಿಕರು ಬಂಧಿಸುತ್ತಾರೆ : ಒಬ್ಬೊಂಟಿಗರಾಗಿ ಸಾಯುಧರಾದ ಸೈನಿಕರನ್ನು ತಪ್ಪಿಸಿಕೊಂಡುಹೋಗುವುದು ಕಷ್ಟ ; ಹೋಗಬೇಡಿ, ರಜಿಯಾ ! ಹೊರಗೆ ಹೋಗಿ ಯಾರಾದರೂ ಬರುತ್ತಾರೆಯೇ ನೋಡು.

(ರಜಿಯಾ ನಿಷ್ಕ್ರಮಿಸುವಳು)

ದಿಲೀಪ್— ನನಗೇನೂ ಪರವಾಯಿಲ್ಲ ಜೇಬೂ ! ಕೈಯಲ್ಲಿ ಆಯುಧ ವಿದ್ದಲ್ಲಿ, ಎಷ್ಟು ಮಂದಿ ಇದ್ದರೂ ತಪ್ಪಿಸಿಕೊಂಡು ಹೋಗಬಲ್ಲೆ;

ಜೇಬು— ಬೇಡ ದಿಲೀಪ್, ಬೇಡ ; ನನ್ನ ದುರದೃಷ್ಟದಿಂದ ಹಿಡಿಯಲ್ಪಟ್ಟಲ್ಲಿ..... ಅಬ್ಬಾಜಾನ್ ಒಳ್ಳೆಯವನಲ್ಲ..... ಹೇ ಖುದಾ ! ಹೇಗೆ ರಕ್ಷಿಸುವೆಯೋ....

ರಜಿ— (ಮೇಲುಸಿರು ಬಿಡುತ್ತಾ ಬಂದು) ರಾಜಕುಮಾರೀ ! ಬಾದು ಹಾ ಔಂಗಜೇಬು.....

ಜೇಬು— (ಭಯಕಂಪಿತಳಾಗಿ) ಅಬ್ಬಾಜಾನ್ !..... ರಜಿಯಾ ..... ನನ್ನ ದಿಲೀಪನಿಗೆ ಯಾವ ಪ್ರಮಾದವೂ ಬರದಿದ್ದಲ್ಲವಷ್ಟೆ ! ರಜಿಯಾ ! ಯಾವುದು ದಾರಿ – ಯಾವುದು ಕರ್ತವ್ಯ ? ಹೇಳು, ರಜಿಯಾ ! ಬೇಗ ಹೇಳು , ನನ್ನ ದಿಲೀಪನನ್ನು, ನನ್ನ ಸ್ವಾಮಿಯನ್ನು ರಕ್ಷಿಸುವ ಬಗೆ ಹೇಗೆ ರಜಿಯಾ ?

ದಿಲೀ— ಭಯವಿಲ್ಲ ರಾಜಕುಮಾರೀ, ನಾನು ಜನ್ಮವೆತ್ತಿರುವುದು ಉತ್ತಮ ರಾಜಪುತ್ರರ ವಂಶದಲ್ಲಿ, ಎಲ್ಲಿ ಕತ್ತಿ ?

ಜೇಬು— ನಿಲ್ಲು, ದಿಲೀಪ್, ಆತುರ ಪಡಬೇಡ : ಪೌರುಷಕ್ಕೆ ಇದು ಸಮಯವಲ್ಲ : ಉಪಾಯದಿಂದ ಕೆಲಸವನ್ನು ಸಾಧಿಸಬೇಕು ; ನೀವು ನನ್ನ ತಂದೆಯವರೊಬ್ಬರೊಂದಿಗೇ ಅಲ್ಲ, ಇಷ್ಟು ದೊಡ್ಡ ಸೈನ್ಯದೊಂದಿಗೆ ಹೋರಾಡಬೇಕಾಗಿರುತ್ತದೆ .... [ಸಶೇಷ

SHAKTI SUDHA

A Superb

ನ್ಯೂ ಅಮೀರಾ

ಕಿಕ್ಕಿರಿದ ಜನಸ್ತೋಮದಿಂದ ಪ್ರದರ್ಶಿಸಲ್ಪಡುತ್ತಿದೆ

ಆದರ್ಶ 10 ನೇ ವಾರ ಆದರ್ಶ ಸತಿ

ಪಾತ್ರ : ಆರ್. ನಾಗೇಂದ್ರರಾವ್, ಜಮುನ, ಜಾನಕಿ, ಮೂಲತಿ, ಮೋಹನ

ಮಹೋನ್ನತ ಕನ್ನಡ ಚಿತ್ರ [ದಿನ 3 ಆಟಗಳು]

10 ನೇ ತಾ॥ ಶನಿವಾರ ಮಹಾಶಿವರಾತ್ರಿ ಪ್ರಯುಕ್ತ ರಾತ್ರಿ 1 ಗಂಟೆಗೆ ಸ್ಪೆಷಲ್ ಆಟವನ್ನು ಏರ್ಪಡಿಸಲಾಗಿದೆ

ವುಡ್‌ಲ್ಯಾಂಡ್ಸ್

2-3-56 ರಿಂದ

ಭಾಗಂ ಭಾಗ್

ತಾರಾಗಣ— ಭಗವಾನ್, ಶಶಿಕಲಾ, ಕಿಶೋರ್‌ಕುಮಾರ್, ಸ್ಮೃತಿ ಬಿಶ್ವಾಸ್ ನೇತ್ರಾನಂದ ನೃತ್ಯಗಳು, ಕರ್ಣಾನಂದ ಸಂಗೀತ ಆಶ್ಚರ್ಯಕರ ಡಂಗುಬಡಿಸುವ ಸನ್ನಿವೇಶಗಳಿಂದ ಕುಂಬಿತುಳುಕುತ್ತಿರುವ ಅತ್ಯಂತ ಮನರಂಜನೀಯ ಹಿಂದಿ ಚಿತ್ರ.

ದಿನವಹಿ 3 ಪ್ರದರ್ಶನ

10 ನೇ ತಾ॥ ಶನಿವಾರ ಮಹಾಶಿವರಾತ್ರಿ ಪ್ರಯುಕ್ತ ರಾತ್ರೆ 12-30 ಕ್ಕೆ ಸ್ಪೆಷಲ್ ಪ್ರದರ್ಶನವನ್ನು ಏರ್ಪಡಿಸಲಾಗಿದೆ

Protect the Cow ಗೋ ಸಂರಕ್ಷಣೆಮಾಡಿ



' ಗೋರಕ್ಷಣ ' ಪತ್ರಿಕೆಗೆ ಚಂದಾದಾರರಾಗಿರಿ ; ವಾರ್ಷಿಕ ಚಂದ 8 ಆಣೆ ಪ್ರೋತ್ಸಾಹಕರ ಚಂದಾ ಒಂದೇಸಾರಿ ರೂ 10 ; ಅವರಿಗೆ ಸದಾ [illegible] ಉಚಿತ

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರ

ಎಲ್ಲಾ ವಿಧವಾದ ಆಯುರ್ವೇದ ಔಷಧಿಗಳಿಗೂ

ಅಶೋಕ ಫಾರ್ಮಸಿ

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For I

ರಣಜಿತ್

ಈ ದಿವಸ

ಏಕಾದಶಿ

Edited, Prin[illegible]
K[illegible]